**2017ರ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ವಿವಿಧ ಹಂತಗಳಲ್ಲಿ ಅಭ್ಯರ್ಥಿಗಳಿಂದ ಹಲವಾರು ಬೇಡಿಕೆಗಳು ಬಂದಿದ್ದವು. ಎಲ್ಲಾ ಬೇಡಿಕೆಗಳ ಬಗ್ಗೆ ಸ್ಪಷ್ಟವಾದ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಇವುಗಳನ್ನು ಕೆಳಗಿನಂತೆ ಪಟ್ಟಿ ಮಾಡಿದೆ.**

| ಕ್ರಮ ಸಂಖ್ಯೆ | ಅಭ್ಯರ್ಥಿಗಳ ಬೇಡಿಕೆಗಳು | ಇಲಾಖೆ ತೆಗೆದಕೊಂಡ ನಿರ್ಧಾರಗಳು |
|---|---|---|
| 01 | ಪತ್ರಿಕೆ–2 ಮತ್ತು ಪತ್ರಿಕೆ–3ರ ಅರ್ಹತಾ ಮಾನದಂಡದ ಸಡಿಲಿಕೆ ಕುರಿತು | ಸರ್ಕಾರದ ಆದೇಶ ಸಂಖ್ಯೆ: ಇಡಿ 321 ಪಿಬಿಎಸ್ 2018 ಬೆಂಗಳೂರು ದಿನಾಂಕ: 23–08–2018 ರ ಅನ್ವಯ ಅರ್ಹತಾ ಮಾನದಂಡದ ಸಡಿಲಿಕೆಗೆ ಅವಕಾಶವಿರುವುದಿಲ್ಲ. |
| 02 | ಪ್ರಶ್ನೆಪತ್ರಿಕೆಯಲ್ಲಿನ ತೆಗೆದುಹಾಕಲಾದ ಪ್ರಶ್ನೆಗಳಿಗೆ ಕೃಪಾಂಕ ನೀಡುವ ಬಗ್ಗೆ | ಯಾವುದೇ ಕೃಪಾಂಕ ನೀಡದಿರಲು ನಿರ್ಧರಿಸಲಾಗಿದೆ. ಅದಕ್ಕೆ ಬದಲಾಗಿ ಒಟ್ಟು ಅಂಕಗಳಲ್ಲಿ ತೆಗೆದುಹಾಕಲಾದ ಪ್ರಶ್ನೆಗಳ ಅಂಕಗಳನ್ನು ಕಡಿತಗೊಳಿಸಲಾಯಿತು. ಅದರಂತೆಯೇ ಕಟ್‌ಆಫ್ ಕೂಡ ಕಡಿತಗೊಂಡಿರುತ್ತದೆ. |
| 03 | ತಪ್ಪಾಗಿ ನಮೂದಿಸಿರುವ ನೋಂದಣಿ ಸಂಖ್ಯೆಗಳನ್ನು ಸರಿಪಡಿಸಿ ಅವಕಾಶ ನೀಡುವ ಬಗ್ಗೆ | ಇದಕ್ಕೆ ಅವಕಾಶ ನೀಡದಿರಲು ನಿರ್ಧರಿಸಲಾಗಿದೆ. ಕಾರಣ ಈ ಕಛೇರಿಯಲ್ಲಿ ಉತ್ತರ ಪತ್ರಿಕೆಗಳನ್ನು ಸ್ವೀಕರಿಸಿದ ನಂತರ, ಉತ್ತರ ಪತ್ರಿಕೆಗಳಲ್ಲಿನ ಯಾವುದೇ ಅಂಶವನ್ನು ತಿದ್ದುಪಡಿ ಮಾಡಿದಲ್ಲಿ ಅದು ಅನಧಿಕೃತವಾಗಿದ್ದು, ಪರೀಕ್ಷಾ ನಿಯಮಕ್ಕೆ ಹೊರತಾಗಿರುತ್ತದೆ. |
| 04 | ಅಭ್ಯರ್ಥಿಯು ಓಎಮ್‌ಆರ್ ಉತ್ತರ ಪತ್ರಿಕೆಯಲ್ಲಿ ಶ್ರೇಣಿಯನ್ನು ನಮೂದಿಸದೆ ಇರುವುದು. | ಈ ಸಂಬಂಧ ಅಭ್ಯರ್ಥಿಗಳು ಮನವಿ ಸಲ್ಲಿಸಿದಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ. ಅಭ್ಯರ್ಥಿಯೇ ಓಎಮ್‌ಆರ್ ಉತ್ತರ ಪತ್ರಿಕೆಯಲ್ಲಿ ಶ್ರೇಣಿ ನಮೂದಿಸುವುದು ಕಡ್ಡಾಯವಾಗಿದ್ದು ಈ ಬಗ್ಗೆ ಓಎಮ್ ಆರ್ ಉತ್ತರ ಪತ್ರಿಕೆಯಲ್ಲಿ ಸೂಚನೆ ನೀಡಲಾಗಿದೆ. ಗಣಕೀಕೃತ ಮೌಲ್ಯಮಾಪನವಾಗಿರುವುದರಿಂದ ಖಾಲಿ ಬಿಟ್ಟಂತಹ ಅಂಕಣಗಳ ಮೌಲ್ಯಮಾಪನಕ್ಕೆ ತಂತ್ರಾಂಶದಲ್ಲಿ ಅವಕಾಶವಿರುವುದಿಲ್ಲ. ಯಾವುದೇ ಹಸ್ತಚಾಲಿತ ಮಾರ್ಪಾಡು ಪರೀಕ್ಷೆಯ ಪಾವಿತ್ರ್ಯತೆಗೆ ಹಾಗೂ ಸಮಗ್ರತೆಗೆ ಧಕ್ಕೆಯುಂಟುಮಾಡುತ್ತದೆ. |
| 05 | ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಅಂಕಗಳನ್ನು ತಪ್ಪಾಗಿ ನಮೂದಿಸಿದ್ದು ಅಂತಹ ತಪ್ಪುಗಳನ್ನು ಸರಿಪಡಿಸುವ ಬಗ್ಗೆ | ಸುಮಾರು 877 ಅಭ್ಯರ್ಥಿಗಳು ಅಂಕಗಳನ್ನು ತಪ್ಪಾಗಿ ನಮೂದಿಸಿರುತ್ತಾರೆ ಹಾಗೂ 285 ಅಭ್ಯರ್ಥಿಗಳು ಶ್ರೇಣಿಯನ್ನು ಅಂಕಗಳನ್ನಾಗಿ ಸರಿಯಾಗಿ ಪರಿವರ್ತನೆ ಮಾಡಿರುವುದಿಲ್ಲ. ಅಂತಹ ಅಭ್ಯರ್ಥಿಗಳಿಗೆ ಅಂಕಗಳ ತಿದ್ದುಪಡಿಗೆ ಅವಕಾಶ ನೀಡಲಾಗಿದೆ. |

| | | |
|---|---|---|
| 06 | ಜೂನ್ ತಿಂಗಳಲ್ಲಿ ಪ್ರಕಟಿಸಲಾದ 1:2 ಅನುಪಾತದ ತಾತ್ಕಲಿಕ ಪರಿಶೀಲನಾ ಪಟ್ಟಿಗಳಲ್ಲಿ ಹೆಸರಿದ್ದು, ಪ್ರಸ್ತುತ ಪ್ರಕಟಿಸಿರುವ 1:3 ಅನುಪಾತದ ತಾತ್ಕಲಿಕ ಪರಶೀಲನಾ ಪಟ್ಟಿಯಲ್ಲಿ ಇಲ್ಲದಿರುವ ಬಗ್ಗೆ | ಜೂನ್ ತಿಂಗಳಲ್ಲಿ ಪ್ರಕಟಿಸಲಾದ ಪಟ್ಟಿಗಳಲ್ಲಿ ತಾಂತ್ರಿಕ ಕಾರಣಗಳಿಂದಾಗಿ ಹಲವಾರು ದೋಷಗಳಿದ್ದು, ಪ್ರಸ್ತುತ ಅವುಗಳನ್ನು ಹಿಂಪಡೆಯಲಾಗಿದ್ದು, ಅವುಗಳು ಮಾನ್ಯ ಹೊಂದಿರುವುದಿಲ್ಲ. ಇದಕ್ಕೆ 2 ಕಾರಣಗಳಿವೆ.<br>1. ಈ ಹಿಂದೆ ತಡೆಹಿಡಿಯಲಾಗಿದ್ದ ಹಲವು ಅಭ್ಯರ್ಥಿಗಳ ಫಲಿತಾಂಶವನ್ನು ಪರಿಗಣಿಸಿರುವುದು.<br>2. ಮೀಸಲಾತಿಯನ್ವಯ ಪಟ್ಟಿಗಳನ್ನು ಸಿದ್ಧಪಡಿಸಿದಾಗ ಪ್ರತಿ ಪಟ್ಟಿಯಲ್ಲಿ ಕೆಲವೊಂದು ಬದಲಾವಣೆಗಳಿರುತ್ತವೆ |
| 07 | ಕಡಿಮೆ ಅಂಕಗಳನ್ನು ಪಡೆದಿರುವ ಕೆಲವೊಂದು ಅಭ್ಯರ್ಥಿಗಳು ಪಟ್ಟಿಯಲ್ಲಿ ಸ್ಥಾನವನ್ನು ಪಡೆದಿದ್ದು. ಹೆಚ್ಚು ಅಂಕಗಳಿಸಿರುವ ಅಭ್ಯರ್ಥಿಗಳು ಪಟ್ಟಿಯಲ್ಲಿ ಸ್ಥಾನ ಪಡೆಯದಿರುವ ಬಗ್ಗೆ | ಮಿಸಲಾತಿಯನ್ವಯ ಆಯ್ಕೆಯನ್ನು ಹಲವಾರು ವರ್ಗಗಳಲ್ಲಿ ಹಾಗೂ ಸುತ್ತುಗಳಲ್ಲಿ ಮಾಡುವ ಸಂದರ್ಭದಲ್ಲಿ ಇದು ಸಹಜವಾಗಿರುತ್ತದೆ. ಮೀಸಲಾತಿಯಲ್ಲಿ ಸುಮಾರು 56ಕ್ಕೂ ಹೆಚ್ಚು ವರ್ಗಗಳಿದ್ದು, ಪ್ರತಿ ವರ್ಗದ ಕಟ್‌ಆಫ್ ಬೇರೆ ಬೇರೆಯಾಗಿರುತ್ತದೆ. ಎಲ್ಲಾ ವರ್ಗಕ್ಕೂ ಏಕರೂಪದ ಕಟ್‌ಆಫ್ ಸಾಧ್ಯವಿರುವುದಿಲ್ಲ. ಜಿಲ್ಲಾವಾರು ಕೂಡ ಕಟ್ ಆಫ್ ವ್ಯತ್ಯಾಸವಾಗುತ್ತದೆ. |
| 08 | ತಾತ್ಕಲಿಕ ಪರಿಶೀಲನಾ ಪಟ್ಟಿ ಬಿಡುಗಡೆ ನಂತರದ ಪ್ರಕ್ರಿಯೆ ಏನು? | ಪ್ರಸ್ತುತ 1:3 ಅನುಪಾತದ ತಾತ್ಕಲಿಕ ಆಯ್ಕೆ ಪಟ್ಟಿಯಲ್ಲಿ ಹೆಸರಿರುವ ಎಲ್ಲಾ ಅಭ್ಯರ್ಥಿಗಳು ತಾವು ಅರ್ಜಿ ಸಲ್ಲಿಸಿರುವ ಜಿಲ್ಲೆಯ ಉಪನಿರ್ದೇಶಕರು (ಆಡಳಿತ)ರವರ ಸೂಚನೆಯ ಮೇರೆಗೆ ಮೂಲದಾಖಲೆಗಳ ಪರಿಶೀಲನೆಗೆ ಹಾಜರಾಗತಕ್ಕದ್ದು. ನಂತರದಲ್ಲಿ 1:1 ಅನುಪಾತದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು. |

**ಹಕ್ಕು ನಿರಾಕರಣೆ:**

ಮೇಲ್ಕಾಣಿಸಿದ ಪದೇ ಪದೇ ಕೇಳಲಾಗುವ ಪ್ರಶ್ನೆಗಳ ಉತ್ತರಗಳು ನೇಮಕಾತಿ ಪ್ರಕ್ರಿಯೆಯನ್ನು ಸರಳವಾಗಿ ಅರ್ಥೈಸಿಕೊಳ್ಳುವ ಸಲುವಾಗಿ ಮಾತ್ರ, ಎಲ್ಲವೂ ನೇಮಕಾತಿಯ ನಿಯಮಗಳಿಗೆ ಒಳಪಟ್ಟಿರುತ್ತದೆ.